ಇ) ಧಾರ್ಮಿಕ ಸಂಸ್ಥೆಗಳು ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಿದ ತಾಲ್ಲೂಕುವಾರು ವಿವರ:

ಕ.ಸ.	ಧಾರ್ಮಿಕ ಸಂಸ್ಥೆ	ತಾಲ್ಲೂಕು	ಮನೆಗಳ ಸಂಖ್ಯೆ
1.	ಮಾತಾ ಅಮೃತಾಮಯಿ	ರಾಯಚೂರು	242
2.	ಧರ್ಮಸ್ಥಳ	ನವಲಗುಂದ	250
3.	ಜೆ.ಎಸ್.ಎಸ್. ಮೈಸೂರು	ಹುನಗುಂದ	107
		ಒಟ್ಟು	**599**

ನೆರೆ ಹಾವಳಿ ಸಂತ್ರಸ್ಥರಿಗೆ ರಚಿಸಲಾದ ಮನೆಗಳು

152 (190) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಎಷ್ಟು ಸಂಖ್ಯೆಯ ಮನೆಗಳನ್ನು ನಿರ್ಮಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅನುಮತಿ ನೀಡಲಾಗಿದೆ;

ಆ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಮನೆಗಳನ್ನು ನಿರ್ಮಿಸಲು ಈವರೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಎಷ್ಟು ಅನುದಾನವನ್ನು ಯಾವ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಳಿಸಲಾಗಿದೆ;

ಇ) ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮವು ನೆರೆಹಾವಳಿ ಸಂತ್ರಸ್ಥರಿಗಾಗಿ ಈವರೆಗೆ ಎಷ್ಟು ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ;

ಈ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿರ್ಮಿಸಿರುವ ಎಷ್ಟು ಮನೆಗಳನ್ನು ನೆರೆ ಹಾವಳಿ ಸಂತ್ರಸ್ಥ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ರಾಜ್ಯ ಸರ್ಕಾರದಿಂದ ನೆರೆ ಹಾವಳಿ ಸಂತ್ರಸ್ಥರಿಗಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ 14850 ಮನೆಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿದೆ.

ಕೇಂದ್ರ ಸರ್ಕಾರವು ಪ್ರವಾಹ ಪೀಡಿತರಿಗಾಗಿ 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ 7437 ಮನೆಗಳ ಗುರಿ ನೀಡಿರುತ್ತದೆ.

ಆ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಮನೆಗಳನ್ನು ನಿರ್ಮಿಸಲು ಈವರೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ರೂ. 145.79 ಕೋಟಿಗಳ ಅನುದಾನವನ್ನು ಕಂದಾಯ ಇಲಾಖೆಯು ಲೆಕ್ಕ ಶೀರ್ಷಿಕೆ

8235-00-111-0-02 "Public Contributions to Calamity Relief" ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯಡಿ ನೀಡಿದ ಗುರಿಗೆ ಅನುಗುಣವಾಗಿ ರೂ. 297.48 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.

ಇ) ಆಸರೆ ಯೋಜನೆಯಡಿ ನೀಡಲಾದ 14850 ಮನೆಗಳ ಪೈಕಿ 13057 ಮನೆಗಳು ಪ್ರಾರಂಭಗೊಂಡು, ಈವರೆಗೆ 3029 ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ. ಇನ್ನುಳಿದಂತೆ 11821 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

ಕೇಂದ್ರ ಸರ್ಕಾರವು ಇಂದಿರಾ ಆವಾಸ್ ಯೋಜನೆಯಡಿ ನೆರೆ ಹಾವಳಿ ಸಂತ್ರಸ್ಥರಿಗಾಗಿ ನೀಡಲಾದ 7437 ಗುರಿಗೆ ಎದುರಾಗಿ 1478 ಫಲಾನುಭವಿಗಳು ಈಗಾಲೇ ಆಯ್ಕೆಯಾಗಿದ್ದು, ಉಳಿದ ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿರುತ್ತದೆ. ಹಾಗೂ 14 ಮನೆಗಳು ಪೂರ್ಣಗೊಂಡಿದ್ದು, 335 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಈ) ಪ್ರಾರಂಭಗೊಂಡಿರುವ 13057 ಮನೆಗಳ ಪೈಕಿ 3029 ಮನೆಗಳ ಕಾಮಗಾರಿಯು ಪೂರ್ತಿಗೊಳಿಸಲಾಗಿದೆ. 498 ಮನೆಗಳು ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗಿರುತ್ತದೆ.

ಆಸರೆ ಯೋಜನೆ ಮನೆಗಳ ವಿವರ

153 (192) ಶ್ರೀ ವಸಂತಬಂಗೇರ .ಕೆ (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಸರೆ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ಮನೆಗಳನ್ನು ರಚಿಸಲು ಗುರಿ ನಿಗದಿಪಡಿಸಲಾಗಿದೆ;

ಆ) ಈವರೆಗೆ ಎಷ್ಟು ಮನೆಗಳನ್ನು ಪೂರ್ತಿಗೊಳಿಸಲಾಗಿದೆ;

ಇ) ಎಷ್ಟು ಮನೆಗಳನ್ನು ಈವರೆಗೆ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ;

ಈ) ಈವರೆಗೆ ಈ ಯೋಜನೆಗಾಗಿ ಸರ್ಕಾರದಿಂದ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) 59,212 ಮನೆಗಳು

ಆ) 17,194 ಮನೆಗಳು

ಇ) 3723 ಮನೆಗಳು